‘ನಿಮಗ ಊರಿನ ದೈವದ ಮಾತಿನ ಮ್ಯಾಗ ಕಿಮ್ಮತ್ತಿಲ್ಲ. ಅವರ ವಿರುದ್ಧ ದನಿ ಎತ್ತೀರಿ. ಇಲ್ಲೀವರೆಗೂ ಯಾವ್ರೊಬ್ಬನೂ ಈ ದೈವದ ತೀರ್ಮಾನಕ್ಕ ತಿರುಗಿ ಬಿದ್ದದ್ದಿಲ್ಲ. ನನ್ನಂಥ ನಾನೂ ಸುಮ್ಮನ ಕುಂದರತೇನಿ ಗೊತ್ತೈತಿಲ್ಲೋ...’ ಎನ್ನುತ್ತಲೇ ಸೊಂಟದ ಕೆಳಗಿನ ಪದಗಳನ್ನೆಲ್ಲ ಬಳಸಿ ಒಂದೂ ಮಾತಾಡದ ಹಾಗೆ ಮಾಡುತ್ತಿದ್ದ. ಅಂತಹವನು ಈಗ ‘ಪಾರವ್ವ ಕಾಲಿಗೆ ಬಿದ್ದು, ಕಣ್ಣೀರು ಹಾಕುತ್ತಾ, ಕರುಣೆಯ ಭಿಕ್ಷೆ ತೋರಿಸಿ’ ಎಂದು ಗೋಗರೆವಾಗ ಗೌಡನ ಕಲ್ಲೆದೆ ಎಲ್ಲಿ ಕರಗಬೇಕು?

‘ನೋಡಬೇ... ಈಗ ಕೊಟ್ಟಿರೋ ದೈವದ ತೀರ್ಮಾನವೇ ಕೊನೀ ತೀರ್ಮಾನ. ಇನ್ನೂ ಒಂದು ವಾರ ಟೈಮ್ ಹೆಚ್ಚು ತಗೋರಿ. ಪೂರ್ಣ ರೊಕ್ಕಾನರ ಕೊಡ್ರೀ, ಇಲ್ಲಾ ಹೊಲ ನನ್ನ ಹೆಸ್ರಿಗೆ ಹಚ್ರೀ ಅಷ್ಟ’ ಕಡ್ಡಿ ಎರಡು ತುಂಡು ಮಾಡಿದ ಹಾಗೆ ಹೇಳಿ ಬೋರೆಗೌಡ ಹೊರಟುಹೋದ. ಊರಿನ ಜನ ತಮ್ಮ ತಮ್ಮಲ್ಲೇ ಗುಸುಗುಸು ಮಾತಾಡಿಕೊಳ್ಳುತ್ತಾ ಮನೆಯ ಹಾದಿ ಹಿಡಿದರು. ಕೆಂಚಪ್ಪ, ಪಾರವ್ವ ಆಕಾಶವೇ ಕಳಚಿ ಬಿದ್ದವರ ತರಹ ತಲೆಯ ಮೇಲೆ ಕೈಹೊತ್ತು, ಒತ್ತಿ ಬರುವ ಅಳುವನ್ನು ಹತ್ತಿಕ್ಕಿಕೊಳ್ಳಲಾಗದೆ, ಧಾರಾಕಾರವಾಗಿ ಹರಿವ ಕಣ್ಣೀರಿಗೆ ಸಾಕ್ಷಿಯಾಗಿ ಕೂತುಬಿಟ್ಟರು.

ಪದವಿ ಓದುತ್ತಿದ್ದ ಮಗ ಶಿವಾನಂದ, ಮಗಳು ಅಂಬುಜಾ, ಕೆಂಚಪ್ಪ ಮತ್ತು ಪಾರವ್ವ ಎರಡು ದಿನ ಕೂತು ಆಲೋಚನೆ ಮಾಡಿದರೂ ಸಮಸ್ಯೆಗೆ ಪರಿಹಾರ ಸಿಗಲಿಲ್ಲ. ಎಲ್ಲರ ಬಳಿಯೂ ದುಡ್ಡಿಗಾಗಿ ಕೈಚಾಚಿದ್ದಾಯ್ತು, ಎಲ್ಲೂ ಬಿಡಿಗಾಸು ಹುಟ್ಟಲಿಲ್ಲ. ಗೌಡ ಕೊಟ್ಟ ಗಡುವು ಮುಗಿಯುತ್ತ ಬಂದ ಹಾಗೆ ಉಳಿದ ಹಾದಿ ಒಂದೇ; ಗೌಡನಿಗೆ ಹೊಲ ಬರೆದುಕೊಟ್ಟು, ಅವನ ಸಾಲ ತೀರಿಸಿ, ಉಳಿದ ಮೇಲಿನ ಹಣ ಅವನು ಕೊಟ್ಟರೆ ತೆಗೆದು ಕೊಳ್ಳುವುದು. ಕೆಂಚಪ್ಪ ಮಾನಸಿಕವಾಗಿ ಸಿದ್ಧನಾದ. ಮನೆಯವರನ್ನೆಲ್ಲ ಒಪ್ಪಿಸಿದ. ಬೇರೆ ಮಾರ್ಗವೇ ಇರಲಿಲ್ಲ.

ಅಂದು ಮಂಗಳವಾರ ಮುಂಜಾನೆ ಬೇಗನೆ ಎದ್ದು ಬಸಾಪೂರದ ನಂಬಿಕಸ್ಥ ದೇವರಾದ ಬಸವಣ್ಣನಿಗೆ ಕೈಮುಗಿದು, ‘ನೀ ಹಣೆಬರದಾಗ ಬರದಂಗ ಆಗ್ಲಿ ದೇವ್ರ, ಕೊಡಾವ್ನು ನೀನ ಕಸಕೊಳ್ಳಾವ್ನು ನೀನ’ ಎನ್ನುತ್ತ, ಊರಿನ ಒಂದಷ್ಟು ಹಿರಿಯರನ್ನು ಜೊತೆ ಕರೆದುಕೊಂಡು ಇಲ್ಲೀವರೆಗೂ ಬದುಕಿಗಾಸರೆಯಾಗಿ ತುತ್ತಿನ ಚೀಲವನ್ನು ತುಂಬಿಸಿದ್ದ ತುಂಡು ಹೊಲವನ್ನು ಬೋರೆಗೌಡನಿಗೆ ಬರೆದುಕೊಡಲು ಹೊರಟ. ಇತ್ತ ಗೌಡನಿಗೆ ಈ ಸುದ್ದಿತಿಳಿಯುತ್ತಿದ್ದಂತೆ ಅವನ ಪಟಾಲಮ್ಮಿನ ಜೊತೆ ಸೇರಿ, ಅಂದುಕೊಂಡದ್ದು ಈಡೇರಿದ್ದಕ್ಕೆ ಬಲು ಹರ್ಷಗೊಂಡಿದ್ದ. ಸಂಜೆ ನಮಗೆಲ್ಲ ಗುಂಡು-ತುಂಡು ಸಿಗುತ್ತೆ ಅನ್ನುವ

